**ಪ್ರ ದ ನ್ಯಾದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ**

**ಸಿ ಸಿ ನಂಃ 1493/2021**

ಸಾಕ್ಷಿಯ ಹೆಸರು: ಅಪೂರ್ವ ಸಿ ಜಿ
ತಂದೆ / ಗಂಡನ ಹೆಸರು : ಎಲ್ ಆರ್ ಗಂಗಾದಾರಯ್ಯ
ವಯಸ್ಸು : 26
ಉದ್ಯೋಗ : ಅಸಿಸ್ಟಂಟ್ ಡೈರಕ್ಟರ್ , ಟ್ರೂತ್ ಲ್ಯಾಬ್ಸ , ಬೆಂಗಳೂರು
ವಾಸ ಸ್ಥಳ : ಬೆಂಗಳೂರು

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 08.05.2026**

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಹೆಚ್ ಕೆ ಪೆ ವಕೀಲರಿಂದ**

ನಾನು ನ್ಯಾಯಾಲಯದಿಂದ ಸಮನ್ಸ ಬಂದ ಕಾರಣ ಸಾಕ್ಷಿ ಹೇಳಲು ಬಂದಿರುತ್ತೇನೆ. ದಿಃ 30.07.2024 ರ ನ್ಯಾಯಾಲಯದ ಪತ್ರದ ಮೂಲಕ ನಿಪಿ 1 ರ ಪ್ರಶ್ನಿತ ದಾಖಲಾತಿಯಲ್ಲಿರುವ ಸಹಿ ಹಾಗೂ ಅದರ ಜೊತೆಯಲ್ಲಿ ಒಪ್ಪಿದ ದಾಖಲಾತಿಯಾದ ವಕಾಲತ್ , ಆರೋಪಿಯ ಪ್ಲೀ ಮತ್ತು 313 ಸ್ಟೇಟಮೆಂಟ್ ಗಳಲ್ಲಿ ಇರುವ ಸಹಿ ನಮಗೆ ಕಳುಹಿಸಿದ್ದು ದಿಃ 07.08.2024 ರಂದು ನಮಗೆ ತಲುಪಿ ಸದರಿ ದಾಖಲಾತಿಗಳನ್ನು ನಾವು ಪರಿಶೀಲೀಸಿ ದಿಃ 08.10.2024 ರಂದು ನಮ್ಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಗೆ ತಾನು ನೀಡಿದ ಒಟ್ಟು 5 ಪುಟವುಳ್ಳ ವರದಿಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ವರದಿಯನ್ನು ನಿಸಿ 1 ಎಂದು, ಸಾಕ್ಷಿಯ ಸಹಿಯನ್ನು ನಿಸಿ 1 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ದೂರುದಾರರ ಪರ ಶ್ರೀ ಬಿ ಎನ್ ಎಸ್ ವಕೀಲರಿಂದ**

ನಿಸಿ 1 ನ್ನು ನಾನು ತಯಾರು ಮಾಡಿದ್ದು ನನ್ನ ಜೊತೆ ಅಸಿಸ್ಟಂಟ್ ನಂದಿತಾ ಎನ್ ರವರು ಇರುತ್ತಾರೆ. ನಿಸಿ 1 ನ್ನು ನಂದಿತಾ ರವರು ತಯಾರು ಮಾಡಿರುತ್ತಾರೆ ನಾನು ಭಾಗಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ವರದಿಯನ್ನು ತಯಾರು ಮಾಡಬೇಕಾದರೆ ಯಾವುದೆ ಸಹಿಗಳನ್ನು ಅನಾನ್ಯಲಸ್ ಮಾಡ ಬೇಕಾದರೆ ಮುದ್ರಿತ ಫೋಟೋಗಳನ್ನು ತೆಗೆಯ ಬೇಕಾದ ಅವಶ್ಯಕತೆ ಇದ್ದು ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇಲ್ಲ ನಾವು ಪ್ರಶ್ನಿತ ಸಹಿ ಮತ್ತು ಒಪ್ಪಿದ ಸಹಿಯನ್ನು ಹೈ ರೆಸಲ್ಯೂಶನ್ ಸ್ಕಾನರ್ ನಿಂದ ಸ್ಕಾನ್ ಮಾಡಿ ಅದರ ಜಸ್ಟಪೋಸ್ಟ ಚಾರ್ಟ್ ನ್ನು ವರದಿಯ ಪುಟ 5 ರಂತೆ ನೀಡಿರುತ್ತೇವೆ ಎಂದು ನುಡಿದರು. ವರದಿಯನ್ನು ತಯಾರಿಸುವ ಸಮಯದಲ್ಲಿ ಎಷ್ಟು ಜನ ಹಾಜರು ಇದ್ದರು ಮತ್ತು ಯಾವ ಯಾವ ಪ್ರಯೋಗಗಳಿಗೆ ಸಹಿಗಳನ್ನು ಒಳಪಡಿಸಿರುತ್ತೇನೆ ಎಂದು ವಿಡಿಯೊಃವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಯಾವ ಯಾವ ಪ್ರಯೊಃಗಗಳಿಗೆ ಒಳಪಡಿಸಿರುತ್ತೇನೆ ಎಂದು ವರದಿಯನ್ನು ಹಾಜರಪಡಿಸಿದ್ದು ವಿಡಿಯೊಃವನ್ನು ಹಾಜರಪಡಿಸಿರುವುದಿಲ್ಲ . ಸಾಕ್ಷಿಯು ಮುಂದುವರೆದು ವಿಡಿಯೊಃ ಮಾಡಬೇಕಾದ ನಿಯಮ ನಮ್ಮ ಲ್ಯಾಬ ನಲ್ಲಿ ಇರುವುದಿಲ್ಲ ಎಂದು ನುಡಿದರು.

ಒಪ್ಪಿದ ಸಹಿಗಳಲ್ಲಿ ಪ್ರತಿಯೊಂದು ಎಸ್ 1 ಯಿಂದ ಎಸ್ 4 ಸಹಿಗಳು ವ್ಯತ್ಯಾಸ ಕಂಡು ಬರುತ್ತದೆ ಎಂದರೆ ಸಾಕ್ಷಿಯು ನ್ಯಾಚುರಲ್ ವೇರಿಯಶನ್ ಕಂಡು ಬರುತ್ತದೆ ಎಂದು ನುಡಿದರು. ಮೋಸ ಮಾಡುವ ಉದ್ದೇಶದಿಂದ ಒಪ್ಪಿ ಸಹಿಗಳನ್ನು ಮಾಡಿರುವುದಾಗಿರುತ್ತದೆ ಎಂದರೆ ಸರಿಯಲ್ಲ. ಪ್ರಶ್ನಿತ ಸಹಿಗಳಲ್ಲೂ ಒಪ್ಪಿದ ಸಹಿಯ ರೀತಿ ವ್ಯತ್ಯಾಸ ಗಳು ಕಂಡು ಬರುತ್ತಿದೆ ಎಂದರೆ ಸಾಕ್ಷಿಯು ನ್ಯಾಚುರಲ್ ವೇರಿಯಶನ್ ಆಗಿರುವುದಿಲ್ಲ ಬೇರೆ ಬೇರೆ ವ್ಯಕ್ತಿಗಳ

ಬರಿಯುವ ವ್ಯಕ್ತಿಯ ಶೈಲಿ ಆಗಿರುತ್ತದೆ ಎಂದು ನುಡಿದರು. ಕ್ಯೂ 1 ಮತ್ತು ಕ್ಯೂ 2 ಗೂ ಸಹಿಗಳಿಗೂ ಸೈಜ್ ನಲ್ಲಿ ವ್ಯತ್ಯಾಸ ಇರುವ ಬಗ್ಗೆ ಏನಾದರೂ ವರದಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಸೈಜ್ ನಲ್ಲಿ ಮೇಲ್ನೋಟಕ್ಕೆ ವ್ಯತ್ಯಾಸ ಕಂಡು ಬರುತ್ತದೆ ಆದರೆ ಅದಕ್ಕೆ ವರದಿಯನ್ನು ನೀಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಮಗೆ ಪ್ರಶ್ನೆತ ಸಹಿ ಮತ್ತು ಒಪ್ಪಿದ ಸಹಿಗಳಿಗೂ ಮಾತ್ರ ಹೋಲಿಕೆ ಮಾಡಿ ದ್ದು ಅದರಂತೆ ವರದಿ ನೀಡಿರುತ್ತೇನೆ ಎಂದು ನುಡಿದರು.

ನನ್ನ ವರದಿಯಲ್ಲಿ ಎಷ್ಟು ವರುಷದ ವ್ಯಕ್ತಿ ಸದರಿ ಸಹಿಗಳನ್ನು ಮಾಡಿರುತ್ತಾರೆ ಎಂದು ತಿಳಿಸಿರುವುದಿಲ್ಲ. ಆ ರೀತಿ ಹೇಳಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯ ಆ ರೀತಿ ಹೇಳಲು ಯಾವುದೆ ವೈಜ್ಞಾನಿಕ ಪ್ರಯೋಗಗಳು ಇಲ್ಲದಿರುವುದರಿಂದ ತಿಳಿಸಿರುವುದಿಲ್ಲ ಎಂದು ನುಡಿದರು. ನ್ಯಾಯಾಲಯದ ಆದೇಶ ಒಪ್ಪಿದ ಮತ್ತು ಪ್ರಶ್ನೆತ ಸಹಿಗಳ ಹೋಲಿಕೆ ಬಗ್ಗೆ ಮಾತ್ರ ಇದ್ದು ಅದರಂತೆ ನಾವು ವರದಿಯನ್ನು ನೀಡಿದ್ದು , ಸಹಿಯ ವಯಸ್ಸು ಎಷ್ಟಾಗಿರುತ್ತದೆ ಎಂದು ವರದಿ ನೀಡಿರುವುದಿಲ್ಲ ಎಂದು ನುಡಿದರು. ಯಾವ ಯಾವ ಬಣ್ಣ ದ ಸಹಿಗಳನ್ನು ಮಾಡಲಾಗಿರುತ್ತದೆ ಎಂದು ತಿಳಿಸಿರುವುದಿಲ್ಲ ಎಂದರೇ ಸರಿ . ಯಾವುದಾದರೂ ವ್ಯಕ್ತಿಯು ಎಡಗೈಯಿಂದ ಮೋಸ ಮಾಡುವ ಉದ್ದೇಶದಿಂದ ಕ್ಯೂ 1 ಮತ್ತು ಕ್ಯೂ 2 ಸಹಿಗಳನ್ನು ಮಾಡಬಹುದು ಎಂದರೆ ಸರಿಯಲ್ಲ. ಬ್ಯಾಂಕಿನಲ್ಲಿ ನೀಡಿದ ಸ್ಪೆಸಿಮನ್ ಸಹಿಯನ್ನು ನೋಡದೆ ಸಹಿಯನ್ನು ಹೋಲಿಕೆ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸಮಕಾಲಿನ ದಾಖಲಾತಿಯನ್ನು ನೀಡಿದ್ದಲ್ಲಿ ಅದನ್ನು ಸಹ ನೋಡಿ ವರದಿಯನ್ನು ನೀಡಲು ಆಗುತ್ತದೆ ಎಂದು ನುಡಿದರು.

ಯಾವುದೆ ಆದುನಿಕ ಸಲಕರಿಣೆಗಳನ್ನು ಬಳಸದೆ ನಾನು ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಕಚೇರಿಯಲ್ಲಿ ಯಾರೋ ಸಿಬ್ಬಂದಿಗಳು ತಯಾರು ಮಾಡಿದ ವರದಿಗೆ ನಾನು ಖುದ್ದಾಗಿ ಭಾಗಿಯಾಗದೆ ವರದಿಗೆ ಸಹಿ ಮಾಡಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಅನುಕೂಲವಾಗಲೆಂದು ಆತಾರುವಾಗಿ ಸಮಯವನ್ನು ತೆಗೆದುಕೊಳ್ಳದೆ ಸುಳ್ಳು ವರದಿಯನ್ನು ತಯಾರು ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ.